MYSORE LEGISLATIVE ASSEMBLY

Wednesday, 20th October 1965.

The House met in the Assembly Chamber, Vidhana Soudha, Bangalore, at One of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS.

(to which oral answers were given).

Arrears of Land Revenue and Surcharge on Land Revenue.

*Q.—147. Sri B. BHASKARA SHETTY (Kaup).—

Will the Government be pleased to state :—

(*a*) the arrears of Land Revenue and surcharge on Land Revenue in the State up-to-date (Districtwise information may be furnished) ;

(*b*) the amount written off or waived under these two heads during the last three years (Districtwise figures may be furnished) ?

A.—Sri M. V. KRISHNAPPA (Minister for Revenue).—

(*a*) Information is furnished in the Statement "A" appended.

(*b*) Information is furnished in the Statement "B" appended.

(SRI M. V. KRISHNAPPA)

STATEMENT "A"

Sl. No.	Name of the District	Arrears of	
		Land Revenue	Surcharge
1	Mysore	30,38,284	11,77,154
2	Mandya	10,52,353	2,32,864
3	Hassan	19,24,750	4,55,121
4	Shimoga	8,95,024	8,60,653
5	Chickmagalur	17,71,542	2,66,386
6	Coorg	4,25,004	1,00,540
7	South Kanara	...	13,05,590
8	Bangalore Urban	14,74,036	90,989
9	Bangalore Rural	19,43,854	4,29,812
10	Kolar	19,44,720	6,37,965
11	Tumkur	7,67,156	5,14,691
12	Chitradurga	14,51,005	3,15,795
13	Bellary	13,16,371	16,25,933
14	Belgaum	10,29,756	68,698
15	Bijapur	20,46,997	1,599
16	Dharwar	11,19,761	31,602
17	North Kanara	7,33,531	38,360
18	Gulbarga	14,34,567	10,56,277
19	Raichur	89,08,600	35,93,999
20	Bidar	32,92,758	8,19,422

STATEMENT "B"

Sl. No.	Name of District	Amount written of	
		Land Revenue	Surcharge
1	Mysore	56,355	3,709
2	Mandya	34,234	48,201
3	Hassan	25,742	26,777
4	Shimoga	1,79,755	13,641
5	Chickmagalur	58,606	27,971
6	Coorg	...	...
7	South Kanara	2,655	...
8	Bangalore Urban	26,32,658	7,405
9	Bangalore Rural	1,45,731	6,912
10	Kolar	2,28,162	7,01,325
11	Tumkur	1,10,143	61,146
12	Chitradurga	23,904	1,620
13	Bellary	105	...
14	Belgaum	...	...
15	Bijapur	562	...
16	Dharwar	19,08,626	...
17	North Kanara	...	...
18	Gulbarga	2,11,560	...
19	Raichur	...	6,66,015
20	Bidar	15,84,200	...

ಶ್ರೀ ಬಿ. ಭಾನ್ಕರ ಶೆಟ್ಟಿ.—ಸಾಧಾರಣ 50 ಕೋಟಿ 19 ಲಕ್ಷದ 4 ಸಾವಿರದ 519 ರೂಪಾಯಿ ಭೂಕಂದಾಯ ಮತ್ತು ಸರ್ಚಾರ್ಜ್ ಬಾಕಿ ಆಗಿದ್ದು ಸಾಧಾರಣ 8 ಕೋಟಿ 76 ಲಕ್ಷದ 7 ಸಾವಿರದ 720 ರೂಪಾಯಿಗಳನ್ನು ತಾವು ಮನ್ನಾ ಮಾಡಿದ್ದೀರಿ. ಇಷ್ಟು ಮೊತ್ತದ ಹಣ ಬಾಕಿ ಉಳಿಯಲಿಕ್ಕೆ ಮತ್ತು 9 ಕೋಟಿ ರೂಪಾಯಿಗಳ ತನಕ ಭೂಕಂದಾಯ ಮಾಫಿ ಕೊಡಲಿಕ್ಕೆ ಬಲವಾದ ಕಾರಣ ಗಳೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ತಮಗೇ ಗೊತ್ತಿದೆ. ಅನೇಕ ಸಲ ಮಳೆ ಬೆಳೆ ಹೋಗಿದೆ ಎಂದು ಹೇಳಿ ತಮ್ಮ ಪಾರ್ಟಿಯವರೇ ನಿಲುವಳಿ ಸೂಚನೆ ಮೂಲಕ ಸ್ಕೇರ್ಸಿಟಿ ಕಂಡೀಷನ್, ಫೇಲ್ಯೂರ್ ಆಫ್ ರೇನ್ಸ್ ಅಂತ ಹೇಳಿ ಅನೇಕ ಸಲ ಪದೇ ಪದೇ ಸರ್ಕಾರದವರನ್ನು ಒತ್ತಾಯ ಮಾಡುತ್ತಾ ಇರುತ್ತಾರೆ.

ಅಧ್ಯಕ್ಷರು.—50 ಕೋಟಿ ರೂಪಾಯಿ ಎಂದು ಹೇಳುತ್ತಾ ಇದ್ದೀರಿ ಅಷ್ಟೊಂದು ಎಲ್ಲ ಇದೆ?

ಶ್ರೀ ಎಂ. ವಿ. ಕೃಷ್ಣಪ್ಪ.—ಟಿಪ್ಪುನುರ್ತಾನನ ಕಾಲದಲ್ಲಿ ಸೊನ್ನೆಗಳು ಬಹಳ ಜಾಸ್ತಿಯಾಯಿತು ಎಂದು ಸೊನ್ನೆ ಬಹೂತ್ ಹೋಗಯೇ; ಸೊನ್ನೇಕು ಮಾರ್ ಡಾಲೆ, ಎಂದು ಹೇಳಿದನಂತೆ. ಹಾಗೆ ಅವರು ಹೇಳುವುದರಲ್ಲಿ ಒಂದು ಸೊನ್ನೆ ಹೊಡೆದು ಹಾಕಿದರೆ ಸರಿಹೋಗುತ್ತದೆ.

ಶ್ರೀ ಬಿ. ಭಾನ್ಕರ ಶೆಟ್ಟಿ.—ಬಡವರ ವಿಷಯದಲ್ಲಿ ತಾವು ಬಹಳ ಒತ್ತಾಯ ಪೂರ್ವಕವಾಗಿ ಅವರಿಂದ ಭೂಕಂದಾಯವನ್ನು ವಸೂಲು ಮಾಡುತ್ತಾ ಇದ್ದೀರಿ. ಆದರೆ ಕೆಲವು ರಾಜಕೀಯ ಪ್ರಭಾವಗಳಿಗೆ ಒಳಗಾಗಿ ತಮ್ಮವರಿಗೆ 8 ಕೋಟಿ ಜಿಲ್ಲರೆ ರೂಪಾಯಿ ಭೂಕಂದಾಯವನ್ನು ಮನ್ನಾ ಮಾಡಿದ್ದೀರಲ್ಲವೇ ? ದಕ್ಷಿಣ ಕನ್ನಡದಲ್ಲಿ ಒಂದು ಒಂದೂವರೆ ತಿಂಗಳಿನಿಂದ ಮಳೆಯಾಗದೆ ಒಂದು ಎರಡನೆ ಬೆಳೆ ಹೋಗುವ ಪರಿಸ್ಥಿತಿ ಇದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಸಹ ಸಾಧಾರಣ 13 ಲಕ್ಷ

(ಶ್ರೀ ಬಿ. ಭಾಸ್ಕರಶೆಟ್ಟಿ)

5 ಸಾವಿರದ 590 ರೂಪಾಯಿ ಬಾಕಿ ಸರ್ಚಾರ್ಜ್ ಬರಬೇಕಾದ್ದು ಇದೆ. ಇದನ್ನೂ ಸಹ ಇತರ ಜಿಲ್ಲೆಗಳಂತೆ ಮನ್ನಾ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕೊಟ್ಟರೆ ಹೇಗೆ ಮನ್ನಾ ಮಾಡುವುದು ?

ಶ್ರೀ ಬಿ. ಭಾಸ್ಕರ ಶೆಟ್ಟಿ.—ಅಲ್ಲೂ ಕೂಡ ಸರ್ಚಾರ್ಜು ಬಾಕಿ ಇದೆ.

ಶ್ರೀ ಎಂ. ವಿ. ಕೃಷ್ಣಪ್ಪ.—ದಕ್ಷಿಣ ಕನ್ನಡ ಜಿಲ್ಲೆಯವರು ಕಂದಾಯ ಕೊಡುವುದರಲ್ಲಿ ಮೈಸೂರು ಸಂಸ್ಥಾನದಲ್ಲೇ ಎಲ್ಲೂ ಇಲ್ಲ, ಅಷ್ಟು ರಾಯಲ್ ಆಗಿ ಕೊಟ್ಟು ಬಿಡುತ್ತಾರೆ. ಅವರಿಗೆ ಫಸ್ಟ್ ಫ್ರೈಸ್ ಕೊಡಬಹುದು, ಒಂದು ಕಾನೂ ಬಾಕಿ ಇಲ್ಲದಂತೆ ಕೊಟ್ಟು ಬಿಡುತ್ತಾರೆ. ಅದಕ್ಕೆ ಅವರಿಗೆ ಕೃತಜ್ಞರಾಗಿದ್ದೇವೆ.

ತಾವು ಬಹಳ ಮಳೆ ಬರುವ ಜಿಲ್ಲೆಯಿಂದ ಬರುತ್ತಾ ಇದ್ದೀರಿ. ಬೇರೆ ಜಿಲ್ಲೆಯಲ್ಲಿ ಮಳೆ ಬೆಳೆ ಹೋಗಿ ಕ್ಷಾಮ ಪರಿಸ್ಥಿತಿ ಉಂಟಾದಾಗ ಅಂತಹ ಸಂದರ್ಭದಲ್ಲಿ ಮನ್ನಾ ಮಾಡುತ್ತಾರೆ, ಮೂರು ವರ್ಷ ಮಳೆ ಇಲ್ಲದೇ ಹೋದರೆ ಸರ್ಕಾರದವರು ರೆವಿಷನ್ ಸಸ್‌ಪೆನ್‌ಷನ್ ಮಾಡಿ ಪೂರ್ತಿಯಾಗಿ ಕಂದಾಯವನ್ನು ಮನ್ನಾ ಮಾಡುತ್ತಾರೆ. ಬದರೆ ಜಿಲ್ಲೆಯಲ್ಲಿ 15 ಸಾವಿರ ರೂಪಾಯಿಗಳನ್ನು ಮನ್ನಾ ಮಾಡಿದೆ. ಅಲ್ಲಿ ಯಾವ ರಾಜಕೀಯಕ್ಕೂ ಒಳಗಾಗಿಲ್ಲ. ಅಲ್ಲಿನ ಪರಿಸ್ಥಿತಿಗೆ ಅನುಗುಣವಾಗಿ ಮನ್ನಾ ಮಾಡಲಾಗಿದೆ.

ಶ್ರೀ ಸಿದ್ದಯ್ಯ ಕಾಶೀಮಠ್.—ಧಾರವಾಡ ಜಿಲ್ಲೆಯಲ್ಲಿ 19 ಲಕ್ಷದ 8 ಸಾವಿರದ 670 ರೂಪಾಯಿಗಳನ್ನು ವಜಾ ಮಾಡಿದ್ದೀರಿ, ಸರ್ಚಾರ್ಜ್ ವಜಾ ಮಾಡದೇ ಇರುವುದಕ್ಕೆ ಕಾರಣವೇನು ಈ ರೀತಿ ಮಾಡುವಾಗ ಯಾವ ಆಧಾರವನ್ನು ಅನುಸರಿಸುತ್ತ ಇದ್ದೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೇಳಿದ್ದನ್ನೇ ಮತ್ತೆ ಹೇಳಬೇಕಾಗುತ್ತದೆ. ಅಭಾವ ಪರಿಸ್ಥಿತಿಯನ್ನು ಸರ್ಕಾರದವರು ಗಮನಕ್ಕೆ ತೆಗೆದು ಕೊಂಡು ಸಸ್‌ಪೆನ್‌ಷನ್, ರಿವಿಷನ್ ಮಾಡುತ್ತಾರೆ.

ಶ್ರೀ ಕೆ. ಲಕ್ಕಪ್ಪ.—ತುಮಕೂರು, ಚಿತ್ರದುರ್ಗ, ಕೋಲಾರ ಜಿಲ್ಲೆಗಳಲ್ಲಿ ಪದೇ ಪದೇ ಕ್ಷಾಮಕ್ಕೆ ಈಡಾಗತಕ್ಕ ಪರಿಸ್ಥಿತಿ ಇರುವುದರಿಂದ ಈಗ ಬಾಕಿ ಏನು ನಿಂತಿದೆ ಅದನ್ನು ಈಗಲಾದರೂ ಮನ್ನಾ ಮಾಡುವುದಕ್ಕೆ ಸರ್ಕಾರದವರು ತೀವ್ರ ಗಮನ ಕೊಡುತ್ತಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಮ್ಮ ಪಾರ್ಟಿ ಸದಸ್ಯರೇ ವಿರೋಧ ಮಾಡುತ್ತಾ ಇದ್ದಾರೆ, ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ರಾಯಚೂರು ಜಿಲ್ಲೆಯಲ್ಲಿ ಎಷ್ಟು ವರ್ಷದಿಂದ ಬಾಕಿ ನಿಂತಿದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇಂಟಗ್ರೇಟ್ ಆದ ಮೇಲೆ ಅಗಾಗ್ಯೆ ರೈಟ್ ಆಫ್ ಮಾಡಿ ಉಳಿದಿರುವುದು ಅಷ್ಟು.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಬಾಕಿ ಬಹಳ ಬರಬೇಕೆಂದು ಹೇಳಿ ತೋರಿಸುತ್ತಾ ಇದ್ದೀರಿ, ಈಗ ಮಳೆ ಬರದೇ ಬಹಳ ಅಭಾವವಾಗಿರುವುದರಿಂದ ಸದ್ಯಕ್ಕೆ ಈ ವರ್ಷದಲ್ಲಿ ಬಾಕಿ ವಸೂಲು ಮಾಡದೇ ಮುಂದೆ ಹಾಕುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕ್ಯಾಬಿನೆಟ್‌ನಲ್ಲೂ ಕೂಡ ಮುಖ್ಯ ಮಂತ್ರಿಗಳ ಜೊತೆಯಲ್ಲಿ ಅದೇ ವಿಷಯ ಚರ್ಚೆ ಮಾಡಲಾಯಿತು. ಸಂಸ್ಥಾನಾ ಮಳೆ ಅನೇಕ ಜಿಲ್ಲೆಗಳಲ್ಲಿ ಮಳೆ ಬೆಳೆ ಹೋಗಿ ಅಭಾವವಾಗಿರುವುದರಿಂದ ಬಹುಶಃ ಎಲ್ಲಿ ಈ ಅಭಾವ ಇದೆ ಅಲ್ಲಿ ಕಂದಾಯವನ್ನು ಸಸ್‌ಪೆನ್‌ಷನ್ ಮಾಡುವುದು ಮತ್ತು ಪೋಸ್ಟ್‌ಪೋನ್ ಮಾಡುವ ವಿಷಯವನ್ನು ಸರ್ಕಾರ ಪರಿಶೀಲನೆ ಮಾಡುತ್ತಾ ಇದೆ ; ಬಹುಶಃ ಒಂದೆರಡು ದಿವಸಗಳಲ್ಲಿ ತೀರ್ಮಾನವಾಗುತ್ತದೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದೆರಡು ತಿಂಗಳಿನಿಂದ ಮಳೆಯೇ ಇಲ್ಲ, ಅಲ್ಲೂ ಕೂಡ ಮನ್ನಾ ಮಾಡುವ ವಿಷಯವನ್ನು ಆರೋಚನೆ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಎಲ್ಲಿ ಅಭಾವ ಇದೆ ಆ ಎಲ್ಲಾ ಜಿಲ್ಲೆಗಳಲ್ಲೂ ಮಾಡಬೇಕಾಗುತ್ತದೆ. ನಮಗೆ ಎಲ್ಲಾ ಜಿಲ್ಲೆಗಳೂ ಒಂದೇ.

ಶ್ರೀ ಎಸ್. ಗೋಪಾಲಗೌಡ.—ಬೆಂಗಳೂರು ಅರ್ಬನ್ ಡಿಸ್ಟ್ರಿಕ್ಟ್‌ನಲ್ಲಿ 26 ಲಕ್ಷ ರೂಪಾಯಿಗಳಷ್ಟು ಲ್ಯಾಂಡ್ ರೆವಿನ್ಯೂ ಮತ್ತು 7 ಸಾವಿರ ರೂಪಾಯಿಗಳಷ್ಟು ಸರ್ಚಾರ್ಜ್ ಮನ್ನಾ ಮಾಡಲಾಗಿದೆ. ಇದನ್ನು ಯಾವ ವರ್ಷ ಮನ್ನಾ ಮಾಡಲಾಯಿತು ? ಬೆಂಗಳೂರು ಅರ್ಬನ್ ಡಿಸ್ಟ್ರಿಕ್ಟ್‌ಗೆ ಸೇರಿರತಕ್ಕ ತಾಲ್ಲೂಕುಗಳಲ್ಲಿ ಯಾವಾಗ ಕ್ಷಾಮ ಪರಿಸ್ಥಿತಿ ಇತ್ತು ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಪ್-ಟು-ಡೇಟ್ ಕೇಳಿದ್ದಾರೆ. ಇಷ್ಟು ಬಾಕಿ ಇದೆ, ಇಷ್ಟು ರೈಟ್ ಆಫ್ ಮಾಡಲಾಗಿದೆ ಎಂದು ಹೇಳಿದೆ ಇದರಲ್ಲಿ 4-6 ವರ್ಷದ್ದು ಸೇರಿದೆ 7-8 ವರ್ಷದ್ದು ಸೇರಿದೆ ಆ ವಿವರ ನನ್ನ ಹತ್ತಿರ ಇಲ್ಲ.

ಶ್ರೀ ಎ. ಕೃಷ್ಣಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಯಿಂದ ಕಳೆದ ವರ್ಷದ್ದುಸ್ವಲ್ಪ ಮಾಫಿ ಮಾಡ ಬೇಕು. ಮತ್ತೆ ಸರ್ಚಾರ್ಜ್ ಮಾಡಿದ್ದು ಹೆಚ್ಚಾಗಿದೆ ಆದನ್ನು ಕಡಿಮೆ ಮಾಡಬೇಕು ಎಂದು ಹೇಳಿ ಸರ್ಕಾರಕ್ಕೆ ಮನವಿ ಬಂದಿದೆಯೇ ? ಬಂದಿದ್ದರೆ ರಿಯಾಯತಿ ತೋರಿಸದೇ ಇರಲು ಕಾರಣವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ಎಲ್ಲೆಲ್ಲಿ ಅದರ ಅವಶ್ಯಕತೆ ಇದೆಯೋ ಅಲ್ಲಿ ಮಾಡುತ್ತೇವೆ. ಸಾಧಾರಣ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದೇವರು ಬಹಳ ಮಳೆಯನ್ನು ಕೊಡುತ್ತಾನೆ, ಅಲ್ಲಿ ಮೊದಲನೆ ಮಳೆ ಜೂನ್‌ನಲ್ಲೆ ಪ್ರಾರಂಭವಾಗಿ ಬೇಕಾದಷ್ಟು ಬರುತ್ತದೆ. ಮೈಸೂರು ಸಂಸ್ಥಾನದಲ್ಲಿ ಮೊದಲನೆ ಬೆಳೆ ಅಲ್ಲಿಂದರೇ ಪ್ರಾರಂಭವಾಗುವುದು. ರೈತರು ಬೆಳೆ ಬಂದಾಗ ಕಂದಾಯ ಕೊಡುವುದೂ ಕೂಡ ಅಲ್ಲಿಂದಲೇ ಪ್ರಾರಂಭವಾಗುವುದು, ಬೇರೆ ಜಿಲ್ಲೆಗಳಲ್ಲಿ ರೈತರಿಗೆ ಬೆಳೆ ಬಂದಾಗ ಮದುವೆ, ಮುಂಜಿ ಸೀಸನ್ ಶುರುವಾಗುತ್ತದೆ, ಬಹುಮಟ್ಟಿಗೆ ಮದುವೆ ಮುಂಜಿಗೆ ಖರ್ಚು ಮಾಡಿಬಿಡುತ್ತಾರೆ.

Sri C. J. MUCKANNAPPA.—May I draw the attention of the Chair that the Hon'ble Minister is giving an answer since integration in some districts, *i.e.*, 8 to 10 years. But the question is very clear and information regarding the amount written off or waived under the two heads during the last three years ?

Mr. SPEAKER.—It may be written off during the last three years, but the accumulation will be during the prior years.

Sri C J. MUCKANNAPPA.—To my Hon'ble friend Sri Gopala Gowda's question, the Hon'ble Minister gave information for 10 years.

ಶ್ರೀ ಎಂ. ವಿ. ಕೃಷ್ಣಪ್ಪ.—ಕಂದಾಯ ಬಾಕಿ ಇರುವುದನ್ನು ಅಪ್-ಟು-ಡೇಟ್ ಕೊಟ್ಟಿದ್ದಾರೆ ರೈಟಿಂಗ್ ಆಫ್ ಒಂದು ವರ್ಷದ್ದು ಅಲ್ಲ. ಎರಡು ಮೂರು ವರ್ಷದ್ದು ಇದೆ.

ಶ್ರೀ ಬಿ. ಭಾನ್ಕರಶೆಟ್ಟಿ.—ಭೂಕಂದಾಯ ಮತ್ತು ನರ್‌ಚಾರ್ಜು ಎರಡೂ ಬಾಕಿ ಬರಬೇಕಾಗಿದೆ. ತೋದನಲ ಭೂಕಂದಾಯ ಡಬ್ಬಲ್ ಮಾಡಿದ್ದೀರಿ. ಸುಮಾರು ಮೂರು ಕೋಟಿ ಎಂದು ಹೇಳಿದ್ದೀರಿ. ಇನ್ನು ಎರಡು ಕೋಟಿ ಜಾಸ್ತಿಯಾಗುತ್ತದೆ. ಆದ್ದರಿಂದ ನರ್‌ಚಾರ್ಜು ಮಾಫಿ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಸರ್ಕಾರಕ್ಕೆ ಯಾವುದು ರಾಜದಾಯಕವಾದುದು ಎಂದು ಆಲೋಚನೆ ಮಾಡಿ ಆ ರೀತಿ ಮಾಡುತ್ತೇವೆ.

ಶ್ರೀ ಎಸ್. ವಿ. ರಾಮೇಗೌಡ.—ಕೋಲಾರ ಜಿಲ್ಲೆಯಲ್ಲಿ ಸುಮಾರು ಎರಡು ವರ್ಷ ಬೆಳೆ ಆಗದೇ ಇರುವುದರಿಂದ ಕೋಲಾರ ಜಿಲ್ಲೆಯ ಮಟ್ಟಿಗೆ ಪೂರ್ತಿ ಕಂದಾಯ ವಜಾಮಾಡುವ ಆಲೋಚನೆ ಮಾಡಿದ್ದೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅನೇಕ ಜಿಲ್ಲೆಗಳಲ್ಲಿ ಅಭಾವ ಪರಿಸ್ಥಿತಿ ಇರುತ್ತದೆ. ಸರ್ಕಾರ ರೈತರಿಗೆ ತೊಂದರೆಯಾಗದ ಹಾಗೆ ಎಷ್ಟೆಷ್ಟು ಸಸ್‌ಪೆನ್‌ಷನ್ ಮಾಡಬೇಕು ಎಷ್ಟೆಷ್ಟು ರೆಮಿಷನ್ ಮಾಡಬೇಕು ಎನ್ನುವ ಯೋಚನೆ ಮಾಡುತ್ತಿದ್ದಾರೆ. ಕೋಲಾರದ ಮಟ್ಟಿಗೆ ಅಲ್ಲ, ಎಲ್ಲೆಲ್ಲಿ ಅಭಾವ ಪರಿಸ್ಥಿತಿ ಇದೆಯೋ ಆ ಪ್ರದೇಶಗಳ ವಿಚಾರ ಎಲ್ಲಾ ಆಲೋಚನೆ ಮಾಡುತ್ತಿದ್ದಾರೆ.

Hospitals run by Government to treat the poor people.

*Q.—159. Sri A. J. DODDAMETI (Ron).—

Will the Government be pleased to state :—

(*a*) the number of hospitals in the State which are run by the Government to treat the poor people free of cost ;

(*b*) the names of places where such hospitals are located ;

(*c*) the expenditure incurred by each such hospital per year ?